ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ವಿಧಾನ ಪರಿಷತ್ ಸದಸ್ಯರ ಹೆಸರು : | ಶ್ರೀ ತಿಪ್ಪಣ್ಣ ಕಮಕನೂರ |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : | 796 |
| ಉತ್ತರಿಸಬೇಕಾದ ದಿನಾಂಕ : | 11.03.2020 |
| ಉತ್ತರಿಸುವ ಸಚಿವರು: | ವಸತಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಜಿಲ್ಲೆಯಲ್ಲಿರುವ ಘೋಷಿತ ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟು; (ಮಾಹಿತಿ ನೀಡುವುದು) | ಕಲಬುರಗಿ ಜಿಲ್ಲೆಯಲ್ಲಿ ಒಟ್ಟು 147 ಘೊಷಿತ ಕೊಳಚೆ ಪ್ರದೇಶಗಳಿವೆ. ತಾಲ್ಲೂಕುವಾರು ವಿವರ ಕೆಳಕಂಡಂತಿದೆ. |

| ಕ್ರ. ಸಂ. | ನಗರ/ಪಟ್ಟಣ/ತಾಲ್ಲೂಕು ವಿವರ | ಕೊಳಚೆ ಪ್ರದೇಶದ ಸಂಖ್ಯೆ |
|---|---|---|
| 1 | ಕಲಬುರಗಿ | 53 |
| 2 | ಆಳಂದ | 14 |
| 3 | ಸೇಡಂ | 6 |
| 4 | ಶಹಾಬಾದ್ | 8 |
| 5 | ವಾಡಿ | 9 |
| 6 | ಚಿಂಚೋಳಿ | 13 |
| 7 | ಚಿತ್ತಾಪುರ | 17 |
| 8 | ಅಫಜಲ್‌ಪುರ | 10 |
| 9 | ಜೇವರ್ಗಿ | 9 |
| 10 | ಕಾಳಗಿ | 8 |
| | ಒಟ್ಟು | 147 |

| | | |
|---|---|---|
| ಆ) | ಇಲ್ಲಿ ವಾಸಿಸುತ್ತಿರುವ ನಿವಾಸಿಗಳು ಬೇಡಿಕೆ ಮೇಲೆ ಮನೆ ಯೋಜನೆ ಅಡಿಯಲ್ಲಿ ಅರ್ಜಿಗಳನ್ನು ಸಲ್ಲಿಸಿದ್ದಾರೆಯೇ; ಎಷ್ಟು ಜನರಿಂದ ಅರ್ಜಿಗಳು ಸಲ್ಲಿಸಲ್ಪಟ್ಟಿವೆ; | ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿಯಲ್ಲಿ ಬೇಡಿಕೆ ಮೇಲೆ ಅರ್ಜಿ ಸಲ್ಲಿಸುವ ನಿಯಮ ಇರುವುದಿಲ್ಲ.<br><br>ಆದರೆ ಪ್ರಧಾನ ಮಂತ್ರಿ ಆವಾಸ್ ಯೋಜನೆಯ ಮಾರ್ಗಸೂಚಿಯಂತೆ ಕೊಳೆಗೇರಿ ಪ್ರದೇಶಗಳಲ್ಲಿ ಬೇಡಿಕೆ ಸಮೀಕ್ಷೆ ಕೈಗೊಂಡಿದ್ದು, 14,628 ಕುಟುಂಬಗಳಿಂದ ಮನೆಗಳಿಗೆ ಬೇಡಿಕೆ ಇರುತ್ತದೆ. |
| ಇ) | ಅರ್ಜಿ ಸಲ್ಲಿಸಿದವರಿಗೆ ಸೂರು ಒದಗಿಸಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಮಾಹಿತಿ ನೀಡುವುದು) | ಉದ್ಭವಿಸುವುದಿಲ್ಲ. |

ಕಡತ ಸಂಖ್ಯೆ: ವಇ 38 ಎಸ್‌ಬಿಎಂ 2020

(ವಿ.ಸೋಮಣ್ಣ)
ವಸತಿ ಸಚಿವರು